## ರಾಜ್ಯದಲ್ಲಿ ಖಾಲಿ ಇರುವ ಪಶು ವೈದ್ಯರು ಹಾಗೂ ಪಶು ಪರೀಕ್ಷಕರ ಹುದ್ದೆಗಳ ಭರ್ತಿ

90(498): ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರ ಪೇಟೆ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯರು ಹಾಗೂ ಪಶು ಪರೀಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು?

ಆ. ನೇಮಕಾತಿಯನ್ನು ಯಾವಾಗ ಮಾಡಲಾಗುತ್ತದೆ.

ಇ. ಕೊಡಗು ಜಿಲ್ಲೆಯಲ್ಲಿ ಈ ಸಿಬ್ಬಂದಿಗಳ ಕೊರತೆ ಕಂಡು ಬಂದಿದೆಯೇ? ಎಲ್ಲೆಲ್ಲಿ ಕಂಡು ಬಂದಿದೆ.

ಈ. ಈ ಸ್ಥಳಗಳಿಗೆ ನೇಮಕಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ.

ಉ. ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು

ಶ್ರೀ ಎಂ. ಮಹದೇವ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಪಶುವೈದ್ಯರು - 777

ಪಶು ಪರೀಕ್ಷಕರು - II : 331

ಆ. ಈ ಹುದ್ದೆಗಳನ್ನು ಪದೋನ್ನತಿ ಹಾಗೂ ನೇರ ನೇಮಕಾತಿ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ. ಹೌದು (ಅನುಬಂಧಗತ್ತಿಸಿದೆ)

ಈ. ಹೌದು

ಉ. 250 ಪಶುವೈದ್ಯಕೀಯ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಜರುಗಿಸಲಾಗುತ್ತಿದೆ. ಬೇರೆ ಹುದ್ದೆಗಳನ್ನು ಶೀಘ್ರದಲ್ಲಿ ತುಂಬಲು ಕ್ರಮ ಜರುಗಿಸಲಾಗುವುದು.

ಅನುಬಂಧ

ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳು ಹಾಗೂ ಪಶುಪರೀಕ್ಷಕರ ವಿವರಗಳು

| ಕ್ರ.ಸಂ. ಪಶು ವೈದ್ಯರು | ಪಶುವೈದ್ಯಕೀಯ ಪರೀಕ್ಷಕರು |
|---|---|
| 1. ಪ.ಚಿ. ಭಾಗಮಂಡಲ - 1 | ವಿ.ಜಾ.ತ.ಅ. ಯೋಜನೆ, ಮಡಿಕೇರಿ - 10 ಹುದ್ದೆಗಳು |
| 2. ಪಶು ಆಸ್ಪತ್ರೆ ಸೋಮವಾರಪೇಟೆ-1 | ಪ.ಚಿ. ಸಿದ್ದಾಪುರ, ವಿರಾಜಪೇಟೆ ತಾ: - 1 |
| 3. ಪ.ಚಿ. ಶನಿವಾರ ಸಂತೆ - 1 | ಪ.ಚಿ. ಪಾಲಿಬೆಟ್ಟ, ವಿರಾಜಪೇಟೆ ತಾ: -1 |
| 4. ಪ.ಚಿ. ತಾಂತಳ್ಳಿ - 1 | ಪ.ಚಿ. ಬಿರುನಾಣಿ, ವಿರಾಜಪೇಚಿ ತಾ: -1 |
| 5. ಪ.ಚಿ. ಚಿಟ್ಟಳ್ಳಿ - 1 | ಗೋಸದನಾ ಕೇಂದ್ರ, ದೇವಮಾಚಿ ವಿರಾಜಪೇಟೆ ತಾ: 1 |
| 6. ಪ.ಚಿ. ಮಾದಾಪುರ - 1 | ಪ್ರ,ಗ್ರಾ.ಯೋ ಉ.ಕೇ. ಸಿದ್ದಾಪುರ, ವಿರಾಜಪೇಟೆ ತಾ: 1 |
| 7. ಪಶು ಆಸ್ಪತ್ರೆ, ವಿರಾಜಪೇಟೆ - 1 | ಪ್ರ.ಗ್ರಾ.ಯೋ ಮಾಯಾಮುಡಿ, ವಿರಾಜಪೇಟೆ ತಾ: 1 |
| 8. ಸಂ.ಪ.ಚಿ. ವಿರಾಜಪೇಟೆ - 1 | ಪ್ರ.ಗ್ರಾ.ಯೋ ಕಣ್ಣಂಗಾಲ, ವಿರಾಜಪೇಟೆ ತಾ: 1 |
| 9. ಪ.ಚಿ ಹೂಡಿಕೆರೆ - 1 | ಪ್ರ.ಗ್ರಾ.ಯೋ ನೆಲ್ಲಹೊಕ್ಕು, ವಿರಾಜಪೇಟೆ ತಾ: 1 |
| 10. ಪ.ಚಿ ಶ್ರೀ ಮಂಗಳ -1 | ಪ್ರ.ಗ್ರಾ.ಯೋ, ಪೊನ್ನಂಪೇಟೆ, ವಿರಾಜಪೇಟೆ ತಾ: -1 |
| 11. ಪ.ಚಿ ಕಡಮಲ್ಲೂರು - 1 | ಪ್ರ.ಗ್ರಾ.ಯೋ ಹಳ್ಳಿಗಟ್ಟು, ವಿರಾಜಪೇಟೆ ತಾ:1 |
| 12. ಪ.ಚಿ. ಕನೂರು - 1 | ಕೋಳಿ ವಿಸ್ತರಣಾ ಕೇಂದ್ರ, ಪೊನ್ನಂಪೇಟೆ, ವಿರಾಜಪೇಟೆ ತಾ: -1 |
| 13. ಪ.ಚಿ ಸಂಪಾಜ್ - 1 | ಪ.ಚಿ. ಕೊಡ್ಲಿಪೇಟೆ, ಸೋಮವಾರಪೇಟೆ ತಾ:1 |
| 14. ಪ.ಚಿ ಬಿರುನಾಣಿ - 1 | ಪ.ಚಿ. ಶಾಂತಳ್ಳಿ, ಸೋಮವಾರಪೇಟೆ ತಾ: -1 |
| 15. ಪ.ಚಿ ಧರ್ಮಗಾಲ - 1 | ಪ.ಚಿ. ಚಿಟ್ಟಳ್ಳಿ, ಸೋಮವಾರಪೇಟೆ ತಾ: -1 |

16. - ಗೋಸದಮ ಕೇಂದ್ರ, ಹುದುಗೂರು, ಸೋಮವಾರಪೇಟೆ ತಾ: -1

17. - ಪ್ರಾ.ಪ.ಚಿ ಕೇಂದ್ರ, ಗೋಣಿಮಾರೂರು, ಸೋಮವಾರ ಪೇಟೆ ತಾ: -1

18. - ಪ್ರ.ಗ್ರಾ.ಯೋ ಉ.ಕೇ. ತೋಳೂರುಶೆಟ್ಟಳ್ಳಿ, ಸೋಮವಾರಪೇಟೆ ತಾ: -1

ಒಟ್ಟು ಹುದ್ದೆಗಳು: - 15 ಒಟ್ಟು ಹುದ್ದೆಗಳು - 27

## ಕೊಡಗು ಜಿಲ್ಲೆಯಲ್ಲಿನ ಕೈಗಾರಿಕೆಗಳು

91(500): ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರ ಪೇಟೆ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕೊಡಗು ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ. ಇವುಗಳಿಗೆಲ್ಲಾ ಸರ್ಕಾರದ ಸಹಾಯಧನವನ್ನು ಮಂಜೂರು ಮಾಡಲಾಗಿದೆಯೇ: ಹಾಗಿದ್ದಲ್ಲಿ ಎಷ್ಟು ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದೆ.

ಇ. ಸಹಾಯಧನ ಮಂಜೂರಾಗಿ ಬಿಡುಗಡೆಯಾಗದಿರುವ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು?

ಈ. ಈ ಹಣವನ್ನು ಬಿಡುಗಡೆ ಮಾಡದಿರಲು ಕಾರಣಗಳೇನು?

ಉ. ಹಣ ಬಿಡುಗಡೆ ಮಾಡಲು ಯಾವ ಮಾನದಂಡವನ್ನು ಪರಿಗಣಿಲಾಗುತ್ತದೆ.

ಊ. ಈಗಾಗಲೇ ನೀಡಿರುವ ಸಾಹಯಧನದ ವಿವರಗಳೇನು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕಾ ಸಚಿವರು)

ಅ. ಕೊಡಗು ಜಿಲ್ಲೆಯಲ್ಲಿ ದಿನಾಂಕ: 31.3.2002ರವರೆಗೆ ನೊಂದಾಯಿಸಿರುವ ಘಟಕಗಳ ತಾಲ್ಲೂಕುವಾರು ವಿವರಗಳು:

| ಕ್ರ.ಸಂ. | ತಾಲ್ಲೂಕು | ನೊಂದಾಯಿತ ಘಟಕಗಳ ಸಂಖ್ಯೆ |
|---|---|---|
| 1. | ಮಡಿಕೇರಿ | 1083 |
| 2. | ಸೋಮವಾರಪೇಟೆ | 1077 |
| 3. | ವಿರಾಜಪೇಟೆ | 785 |
| | | 2945 |